# ಶಾಪೊಹಾಲಿಕ್ ನೇಹಾ



ನೇಹಾ ಧೂಪಿಯಾ. ಈ ತೆಳ್ಳನೆಯ ಕೋಲು ಮುಖದ ಚೆಲುವೆ ಕಳೆದ 2–3 ವರ್ಷಗಳಿಂದ ಯಾವುದೇ ಪ್ರಮುಖ ಚಿತ್ರಗಳಲ್ಲಿ ಕಾಣಿಸಿಕೊಂಡಿಲ್ಲ. ಈಗಲೂ ಅಷ್ಟೇ, ಅಂತಹಾ ಬ್ಯುಸಿ ಏನಲ್ಲ. ಅದಕ್ಕೇ ಇರಬೇಕು– ಇತ್ತೀಚೆಗೆ ಬೆಂಗಳೂರಿಗೆ ಲೈಫ್‌ಸ್ಟೈಲ್ ಮತ್ತು ಸ್ಟ್ಯಾಂಡರ್ಡ್ ಚಾರ್ಟರ್ಡ್ ಹೊರತಂದ ಇನ್ನರ್ ಸರ್ಕಲ್ ಪ್ಲ್ಯಾಟಿನಮ್ ಕ್ರೆಡಿಟ್ ಕಾರ್ಡ್ ಬಿಡುಗಡೆಗೆ ಆಗಮಿಸಿದಾಗ ಪತ್ರಕರ್ತರ ಜೊತೆ ಸಾಕಷ್ಟು ಸಮಯ ಕಳೆದರು.

'ನಾನು ಶಾಪೊಹಾಲಿಕ್' ಎಂದೇ ಶುರು ಮಾಡಿದ ಆಕೆ, 'ನನಗೆ ಜೀನ್ಸ್, ಟೀ ಷರ್ಟ್, ಜಾಕೆಟ್ ಇಷ್ಟ' ಎಂದು ಕಣ್ಣು ಮಿಟುಕಿಸುತ್ತ ಒಂದು ಅಡಿ ಎತ್ತರದ ವೆಜೆಸ್ ಶೂ ಮೇಲೆ ಬ್ಯಾಲೆನ್ಸ್ ಮಾಡಿದರು. 'ಸಿನಿಮಾಗಳು' ಎಂದಾಗ ಕೊಂಚ ಗಂಭೀರವಾಗಿ, "ಸೋನು ಸೂದ್ ಜೊತೆಗಿನ 'ಮ್ಯಾಕ್ಸಿಮಮ್' ಡಿ.16ರಂದು ಬಿಡುಗಡೆಯಾಗಲಿದೆ. ಇಮ್ರಾನ್ ಹಷ್ಮಿ ಜೊತೆ ಅಭಿನಯಿಸಿದ 'ರಫ್ತಾರ್' ಮುಂದಿನ ಫೆಬ್ರುವರಿಯಲ್ಲಿ ತೆರೆ ಕಾಣಲಿದೆ" ಎಂದರು.

'ಈಗೇನು ಮಾಡುತ್ತಿದ್ದೀರಿ?' ಎಂದು ಪ್ರಶ್ನಿಸಿದರೆ 'ನನಗೆ ಸಿನಿಮಾ ಕಥೆ ಮುಖ್ಯ, ಪಾತ್ರವಲ್ಲ' ಎಂದೇನೋ ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ ಉತ್ತರಿಸಿದರು.

'ಡಿಯರ್ ಫ್ರೆಂಡ್ ಹಿಟ್ಲರ್' ಸಿನಿಮಾಗೆ ಚಿತ್ರೋತ್ಸವದಲ್ಲಿ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ ಎಂದ ನೇಹಾ, 'ಕನ್ನಡದಲ್ಲಿ ಆಫರ್ ಇದ್ದರೆ ಖಂಡಿತ ನಟಿಸುತ್ತೇನೆ' ಎಂದು ಇಲ್ಲಿಯ ನಿರ್ಮಾಪಕರಿಗೊಂದು ಸಂದೇಶ ನೀಡಿದರು.

'ಯೋಗ, ವ್ಯಾಯಾಮ ಜೊತೆಗೆ ಸಸ್ಯಾಹಾರಿ ಊಟ ನನ್ನ ಫಿಟ್‌ನೆಸ್‌ಗೆ ಕಾರಣ' ಎನ್ನುವುದು ನೇಹಾ ನೇರ ಉತ್ತರ. ಗಡಿಬಿಡಿ ಮಾಡುತ್ತಿದ್ದ ಆಪ್ತ ಕಾರ್ಯದರ್ಶಿ ಕಡೆಗೆ ನೋಡದೆ ಎದುರಿಗಿದ್ದ ಕ್ಯಾಮೆರಾಗೆ ನೇಹಾ ಸಾಕಷ್ಟು ಪೋಸ್‌ಗಳನ್ನು ನೀಡಿದರು. ಅದರಲ್ಲಿ ಒಂದು ಇಲ್ಲಿದೆ.

■ ಸುಧಿ

